

ಬಿಟ್ಟುಕೊಂಡು ಇದ್ದ. ಇವನಿಗೆ ತನ್ನ ದೇಹ ನೋಡಿ ಏನಾದ್ರೂ ಗುರ್ತು ಆಯ್ತಾ? ಅಂತ ಅವನಿಗೆ ಡೌಟು ಆಯ್ತು. ಎಂತದೂ ಸಾ ಮಾತಾಡದೆ ಅಡ್ಡ ಮುಖ ಹಾಕ್ಕೊಂಡು ಕೂತ. ಅಷ್ಟು ಹೊತ್ತಿಗೆ ಸೆಕ್ಯುರಿಟಿಯವ, 'ಅದು ಯಾರದು? ಲೈನ್ ಬಿಟ್ಟು ಆಚೆ ಈಚೆ ಹೋಗುದು? ಮುಖಕ್ಕೆ ಮಾಸ್ಕ್ ಹಾಕ್ಕೊಳ್ಳಿ! ಎಲ್ರಿಗೂ ಒಂದೊಂದು ಮೀಟರ್ ದೂರದಲ್ಲಿ ಚೌಕ ಹಾಕಿದ್ದೇವೆ. ಆಯಾ ಚೌಕದಲ್ಲೇ ನಿಲ್ಲಿ. ಮುಂದೆ ನುಗ್ಲಿಕ್ಕೆ ಪ್ರಯತ್ನ ಮಾಡಿದ್ರೆ ಸಮಾ ಏರ್ದು ಬಿಡ್ತೇನೆ' ಅಂತ ಜೋರಾಗಿ ಬೈತಾ ಕ್ಯೂ ನಿಂತಂಥವರನ್ನು ದೊಣ್ಣೆಯಲ್ಲಿ ದೂಡ್ತಾ ಬಂದ. ಅಷ್ಟು ಹೊತ್ತಿಗೆ ವಾದಿರಾಜನ ತಲೆ ತಿಂತಾ ಇದ್ದವ ಸೀದ ಹೋಗಿ ಚೌಕದ ಗುರುತು ಇದ್ದಲ್ಲಿ ನಿಂತ.

ಅಂತೂ ಕ್ಯೂನಲ್ಲಿ ನಿಂತು ವಾದಿರಾಜ ಬಿಸಿಬೇಳೆ ಬಾತ್, ಇಡ್ಳಿ ಹಾಕಿಸಿಕೊಂಡ. ಎಂಟಾಣೆ ನಾಣ್ಯಕ್ಕಿಂತ ಒಂಚೂರು ದೊಡ್ಡದಿದ್ದ ಎರಡು ಇಡ್ಳಿಗಳು! ಒಂದು ಸಣ್ಣ ಸೌಟಿನಷ್ಟು ಬಿಸಿಬೇಳೆ ಬಾತ್. ಒಂದೇ ತುತ್ತಿಗೆ ತಿಂದು ಮುಗಿಸುವಷ್ಟಿತ್ತು. ವಾದಿರಾಜನಿಗೆ ಎಂಥ ತಿನ್ನೂದಿದ್ರೂ ಪ್ಲೇಟು ತುಂಬ ಹಾಕಿಕೊಂಡು ತಿಂದು ಅಭ್ಯಾಸ. 'ಇನ್ನೊಮ್ಮೆ ಬೇಕಾದ್ರೆ ಹಾಕ್ತೀರಲ್ವಾ?' ಕೇಳಬಹುದಾ ಬೇಡ್ವಾ ಅನ್ನುವ ಅನುಮಾನದಿಂದ ಕೇಳಿದ. 'ಎಂಥದೂ!? ಇನ್ನೊಂದು ಸರ್ತಿಯಾ!? ಯೆಬ್ಬೆ ಹೋಗಿ ಹೋಗಿ... ಒಂದು ಸರ್ತಿ ಹಾಕುದೇ ಹೆಚ್ಚು. ಅದ್ರ ಮೇಲೆ ಎರಡನೇ ಸರ್ತಿ ಬೇಕಾ? ಧರ್ಮಕ್ಕೆ ಕೊಟ್ರೆ ಎಷ್ಟು ಸರ್ತಿ ಸಾ ತಿಂತೀರಿ ನೀವೆಲ್ಲ. ಥತ್ ಎಲ್ಲಿಂದ ಬರ್ತಾರಾ ಏನ ಈ ದರವೇಶಿಗಳು! ದಿನಾದಿನಾ ಜಾಸ್ತಿ ಆಗ್ತಾನೇ ಇದ್ದಾರೆ ಶಿವಾಯಿ ಕಡಿಮೆ ಆಗ್ತಾ ಇಲ್ಲ' ಅಂತ ಬಡಿಸುವವ ಬೈದ.

ವಾದಿರಾಜನಿಗೆ ನಿಂತ ನೆಲ ಬಾಯಿ ಬಿಟ್ಟು ತನ್ನನ್ನು ಎಳ್ಕೊಂಡು ಬಿಡ್ಬಾರ್ದಾ ಅಂತ ಅನಿಸಿತು. ಮೆಲ್ಲ ಅಡಿಕೆ ಹಾಳೆಯ ಪ್ಲೇಟನ್ನು ತೆಕ್ಕೊಂಡು ಬಂದು ಆಚೆ ಇದ್ದ ಕಟ್ಟೆಯಲ್ಲಿ ಕೂತು ತಿನ್ಲಿಕ್ಕೆ ಸುರು ಮಾಡಿದ. ಎಂತಕ್ಕಾ ಏನ ಗಂಟಲು ಕಟ್ಟಿತು. ಹಸಿವು ಜೋರಾಗಿತ್ತು. ಆದ್ರೆ ನಾಲಗೆಗೆ ರುಚಿ ಅಂತ ಅನ್ನಿಸ್ಲೇ ಇಲ್ಲ. ಕಷ್ಟದಲ್ಲಿ ತಿಂದು ಮುಗಿಸಿದ. ತಿಂತಾ ಇರೂವಾಗ ಕ್ಯೂನಲ್ಲಿ ಇದ್ದವರನ್ನು ನೋಡಿದ. ಇದ್ದ ನೂರು ನೂರೈವತ್ತು ಜನರಲ್ಲಿ ಹೆಚ್ಚಿನವರು ಅರವತ್ತು ಎಪ್ಪತ್ತು ಅಥವಾ ಅದಕ್ಕಿಂತ ಸಾ ಜಾಸ್ತಿ ಆಗಿದ್ದ ಪರಬ್ಬುಗಳು. ಉಳಿದ ಸಂದರ್ಭದಲ್ಲಿ ಮುಖಕ್ಕೆ ಮಾಸ್ಕ್ ಇದ್ರೂ ಸಾ ತಿನ್ನುವ ಟೈಂಗೆ ತೆಗಿಲೇ ಬೇಕಲ್ವಾ? ಹಾಗಾಗಿ ಅವರ ಮುಖಗಳನ್ನು ನೋಡಿದ. ತನ್ನ ಗುರ್ತದವರು ಯಾರಾದ್ರೂ ಇದ್ದಾರಾ ಅಂತ. ಸದ್ಯ, ಯಾರು ಸಾ ಕಾಣ್ಲಿಲ್ಲ. ತಿಂದು ಆದ ನಂತ್ರ ಅಲ್ಲಿಯೇ ಇದ್ದ ನಳ್ಳಿಯಲ್ಲಿ ಹೊಟ್ಟೆ ತುಂಬ ನೀರು ಕುಡಿದ. ಅಯ್ಯಬ್ಬ ಅನಿಸಿತು. ತಲೆಗೆ ಸುತ್ತಿಕೊಂಡಿದ್ದ ಬೈರಾಸನ್ನು ಬಿಚ್ಚಿ ಮುಖ ಎಲ್ಲ ಒರೆಸಿಕೊಂಡ. ಊರಿಂದ ಬೆಳಿಗ್ಗೆಯೇ ಸೈಕಲ್ ತುಳ್ಕೊಂಡು ಹನ್ನೆರಡು ಮೈಲು ಬಂದದ್ರಿಂದ ಬೆವರಿ ಚಂಡಿ ಆಗಿದ್ದ. ಈಗ ಹೊಟ್ಟೆಗೆ ಸ್ವಲ್ಪ ಬಿದ್ದಾಗ ಹೋದ ಜೀವ ಬಂದ ಹಾಗೆ ಆಗಿತ್ತು. ಎಲ್ಲ ಹೋದಮೇಲೆ ಆ ಜಾಗ ಎಲ್ಲ ನಿರ್ಜನ. ಅವ ಮಾತ್ರ ಒಂದು ಕಟ್ಟೆಯಲ್ಲಿ ಬೊಬ್ಬರ್ಯನ ಹಾಗೆ ಕೂತ. ಒಮ್ಮೆ ದೊಡ್ಡದಾಗಿ ಸ್ವಾಸ ಬಿಟ್ಟ. ಎಂಥದೆಲ್ಲ ಆಗಿಹೋಯಿತು ತನ್ನ ಬಾಳಿನಲ್ಲಿ ಅಂತ ಎಣಿಸಲು ಸುರು ಮಾಡಿದ.

ಅವನದು ಅಡುಗೆ ಮಾಡುವ ವೃತ್ತಿ. ಅವನ ಊರು ಮಾತ್ರ ಅಲ್ಲ, ಸುತ್ತಮುತ್ತ ಎಂಟು ಹತ್ತು ಕಿಲೋಮೀಟರ್ನಲ್ಲಿ ಯಾರದ್ದೇ ಮನೆಯಲ್ಲಿ ಮದುವೆ, ಸತ್ಯನಾರಾಯಣಪೂಜೆ, ವೈಕುಂಠ ಸಮಾರಾಧನೆ ಹೀಗೆ ಎಂಥದೇ ಇರ್ಲಿ ಅಡುಗೆಗೆ ಸುರೂವಿಗೆ ಅವನನ್ನೇ ಕೇಳ್ತಾ ಇದ್ರು. ಅವನಿಗೆ ಬುಕ್ ಆಗಿದ್ದಿದ್ರೆ ಬೇರೆ ಯಾರನ್ನಾದ್ರೂ ಹೇಳ್ತಿದ್ರು. 'ಸೈಂಪಾಗಕ್ಕೆ (ಅಡುಗೆ) ವಾದಿರಾಜನಿಗೆ ಹೇಳಿದ್ರೆ ಎಂಥದೂ ಸಾ ಹೆದ್ರಿಕೆ ಇಲ್ಲ ಮಾರ್ರೆ. ಊಟದ ಹೊತ್ತಿಗೆ ಐವತ್ತು ಜನ ಹೆಚ್ಚಾಗಿದ್ದಾರೆ ಅಂತ ಗೊತ್ತಾದ್ರೆ ರಪಕ್ಕಂತ ಅನ್ನ, ಸಾರು, ಕೊದ್ದೆಲು ರೆಡಿ ಮಾಡಿ ಆಯ್ತು. ಪಂಕ್ತಿ ಬಡಿಸುವಾಗ ಸ್ವಲ್ಪ ಸಾ ಟೆಂಗ್ಷನ್ ಇಲ್ಲ' ಅಂತ ಊರಿನವರೆಲ್ಲ ಮಾತಾಡಿಕೊಳ್ತಿದ್ರು.

ಮೊದಲಿಗೆ ಅವ ಊರಿನ ಹೈಸ್ಕೂಲು, ಎಲಿಮೆಂಟ್ರಿ ಶಾಲೆಯಲ್ಲಿ ಮಧ್ಯಾಹ್ನದ ಊಟಕ್ಕೆ ಅಡುಗೆ ಮಾಡ್ತಿದ್ದ. ಒಂದೇ ಕಾಂಪೌಂಡಿನೊಳಗೆ ಇದ್ದ ಒಂದೇ ಮ್ಯಾನೇಜ್‌ಮೆಂಟಿನ ಸರ್ಕಾರಿ ಅನುದಾನಿತ ಎಲಿಮೆಂಟ್ರಿ ಶಾಲೆ ಹಾಗೂ ಹೈಸ್ಕೂಲಿಗೆ ಬಡ ಮಕ್ಕಳೇ ಹೆಚ್ಚಿಗೆ ಬರ್ತಾ ಇದ್ದದ್ದು. ಆ ಶಾಲೆ ಊರಿನ ಆಚೆಗೆ ಇತ್ತು. ಹಾಗಾಗಿ ಮಧ್ಯಾಹ್ನ ಊಟಕ್ಕೆ ಮನೆಗೆ ಹೋಗಿ ಬರ್ಲಿಕ್ಕೆ ಎಷ್ಟೋ ವಿದ್ಯಾರ್ಥಿಗಳಿಗೆ ಆಗ್ತಾ ಇರ್ಲಿಲ್ಲ. ಮ್ಯಾನೇಜ್‌ಮೆಂಟಿನವರು ಬಡ ವಿದ್ಯಾರ್ಥಿಗಳಿಗೆ ಒಂದು ರುಪಾಯಿ, ಸ್ವಲ್ಪ ಅನುಕೂಲಸ್ಥರ ಮನೆಯ ಮಕ್ಕಳಿಗೆ ಎರಡು ರುಪಾಯಿ ಊಟಕ್ಕೆ ಫಿಕ್ಸ್ ಮಾಡಿ ಆ ವಿದ್ಯಾರ್ಥಿಗಳಿಗೆಲ್ಲ ಅಡುಗೆ ಮಾಡುವ ಜವಾಬ್ದಾರಿಯನ್ನು ವಾದಿರಾಜನಿಗೆ ವಹಿಸಿದ್ರು. ಆಗ ಮಧ್ಯಾಹ್ನದ ಊಟಕ್ಕೆ ಎರಡೂ ಶಾಲೆಯಿಂದ ಸೇರಿ ಹತ್ ಹತ್ರ ನೂರು ನೂರೈವತ್ತು ವಿದ್ಯಾರ್ಥಿಗಳು ಇರ್ತಿದ್ರು.

ಊಟದ ದುಡ್ಡು ಎಷ್ಟು ಒಟ್ಟಾಯಿತಾ ಅದರ ಅರ್ಧದಷ್ಟು ವಾದಿರಾಜನಿಗೆ, ಉಳಿದದ್ದು ಶಾಲೆಗೆ. ಮಾತ್ರವಲ್ಲ ಒಂದಿಷ್ಟು ಸಂಬಳ ಅಂತ ಶಾಲೆಯ ಮ್ಯಾನೇಜ್‌ಮೆಂಟ್ ಕೊಡ್ತಿತ್ತು. ವಾದಿರಾಜನದು ಉದಾರ ಮನಸ್ಸು. ಮಕ್ಕಳಿಗೆಲ್ಲ ಪ್ರೀತಿಯಿಂದ ಬಡಿಸ್ತಿದ್ದ. ಯಾರಾದ್ರೂ ಕಡಿಮೆ ತಿಂದ್ರೆ, 'ಯೆಂತಕ್ಕಾ ಊಟ ಕಡಿಮೆ ಮಾಡ್ತೀ? ಕಡ್ಡೀ ಪೈಲ್ವಾನ ಆಗ್ತೀ ನೋಡು. ಸರೀ ತಿನ್ಬೇಕು ಬೆಳೆಯುವ ಮಕ್ಕಳು' ಅಂತ ಒತ್ತಾಯ ಮಾಡಿ ತಿನ್ನಿಸ್ತಿದ್ದ. ಮನೆಯಿಂದ ಬರುವಾಗ ಒಂದು ಮಿಳ್ಳಿಯಲ್ಲಿ ಮನೆದ್ದೇ ತುಪ್ಪ ತರ್ತಿದ್ದ. ತಾನು ಬಡಿಸುವಾಗ ಪಾಪದವರ ಮಕ್ಕಳು, ನೋಡ್ಲಿಕ್ಕೆ ರೋಂಟಾಸ್ (ನರಪೇತಲ) ಅಂತ ಕಂಡು ಬಂದ್ರೆ ಬಿಸಿ ಅನ್ನಕ್ಕೆ ಒಂದೆರಡು ಚಮಚ ತುಪ್ಪ ಹಾಕಿ, 'ತಿನ್ನಿ ಮಕ್ಕಳೇ' ಅಂತಿದ್ದ. ಅವನ ಈ ಎಲ್ಲ ನಡತೆಯನ್ನು ಕಂಡಾಗ ಶಾಲೆಯವರಿಗೆ ಅವನ ಬಗ್ಗೆ ಭಾರೀ ಅಭಿಮಾನ ಬರ್ಲಿಕ್ಕೆ ಸುರುವಾಯಿತು.

ಒಂದು ದಿನ ಊಟ ಮಾಡಿದ ಒಬ್ಬ ಹುಡುಗ ದುಡ್ಡು ಕೊಡ್ಲಿಕ್ಕೆ ಆಗುವಾಗ ಪಿಳಿಪಿಳಿ ಕಣ್ಣು ಬಿಡತೊಡಗಿದ. ಅವನ ಮುಖ ಸಣ್ಣಗಾಗಿತ್ತು. ಕಣ್ಣಲ್ಲಿ ನೀರು ಬರತೊಡಗಿತು. ವಾದಿರಾಜ ಆ ಹುಡುಗನನ್ನು ನೋಡಿ, 'ಎಂತಕ್ಕಾ ಕೂಗುದು? ಎಂತ ಆಯ್ತಾ?' ಅಂತ ಕೇಳಿದ. ಅದಕ್ಕೆ ಅವ, 'ನಾನು ಅಪ್ಪ ಕೊಟ್ಟ ದುಡ್ಡನ್ನು ಕಿಸೆಯಲ್ಲಿ ಇಟ್ಟುಕೊಂಡು ಬಂದಿದ್ದೆ. ಅದು ಈ ಕಿಸೆಯ ಒಟ್ಟೆಯಲ್ಲಿ ಎಲ್ಲಿಯೋ ಜಾರಿ ಬಿದ್ದಿದೆ. ನನ್ನ ಹತ್ರ ದುಡ್ಡಿಲ್ಲ ಈಗ' ಅಂತ ಹೇಳಿ ಕೂಗಿದ. 'ಏ... ಅದಕ್ಕೆಲ್ಲ ಯೆಂತಕ್ಕಾ ಕೂಗುದು? ಇವತ್ತು ಇಲ್ಲಾಂತಾದ್ರೆ ನಾಳೆ ಕೊಡು' ಅಂದ. ಆಗ ಒಟ್ಟಿಗೆ ಇದ್ದ ಅವನ ಕ್ಲಾಸ್‌ಮೇಟ್, 'ಭಟ್ರೇ... ಇವ ಸುಳ್ಳು ಹೇಳ್ತಾನೆ. ಇವ ತುಂಬ ಬಡವ. ಮಾತ್ರ ಅಲ್ಲ ಅವನಿಗೆ ಅಪ್ಪ ಇಲ್ಲ' ಅಂದಿದ್ದ. ವಾದಿರಾಜನಿಗೆ ಕರುಳು ಚುರುಕ್ ಅಂದಿತ್ತು. 'ನಾಳೆಯಿಂದ ನೀನು ದುಡ್ಡು ಕೊಡೂದೇ ಬೇಡ. ಚೆಂದ ರುಚಿ ರುಚಿಯಾಗಿ ಊಟ ಮಾಡ್ಬೇಕು. ನಿಂಗೆ ದಿನಾ ನನ್ನ ಲೆಕ್ಕದಲ್ಲಿ ಧರ್ಮಕ್ಕೆ ಊಟ ಅಂದಿದ್ದ.'

ವಾದಿರಾಜನ ಹೆಂಡತಿ ಜೋರಿನವಳು. ಇವ ಹೀಗೆ ಧರ್ಮಕ್ಕೆ ಮಕ್ಕಳಿಗೆ ಊಟ ಹಾಕುದು ಅವಳಿಗೆ ಇಷ್ಟ ಆಗ್ತಾ ಇರ್ಲಿಲ್ಲ. 'ನೀವು ಹೀಗೆ ದಾನಶೂರ ಕರ್ಣನ ಹಾಗೆ ಎಲ್ರಿಗೆ ಧರ್ಮಕ್ಕೆ ಊಟ ಹಾಕ್ತಾ ಬಂದ್ರೆ ನಮಿಗೆ ಚೊಂಬೇ ಗತಿ. ಮನೆಯಲ್ಲಿ ಪ್ರಾಯಕ್ಕೆ ಬಂದ ಹೆಣ್ಣುಮಕ್ಕಳಿದ್ದಾರೆ. ಅವರಿಗೆ ಮದುವೆ ಮಾಸ್ರಿ ಆಗೂದು ಬೇಡ್ವಾ? ಯಾರದ್ದೋ ಹಟ್ಟಿ ಕೊಟ್ಟಿಗೆಯಂಥಾ ಮನೆಯಲ್ಲಿ ಸಾವಿರಗಟ್ಟಲೆ ಬಾಡಿಗೆ ಕೊಟ್ಕೊಂಡು ಬದುಕ್ತಾ ಇದ್ದೇವೆ. ನಮಿಗೇಂತ ಸ್ವಂತದ್ದು ಮನೆ ಆಗೂದು ಬೇಡ್ವಾ?' ಅಂತ ಕುಚ್ಚಣೆಸ್ತಾನೇ ಇರ್ತಿದ್ಲು. ಅವನ ಗ್ರಹಚಾರಕ್ಕೆ ಕಾಲಕ್ರಮೇಣ ಕನ್ನಡ ಮೀಡಿಯಮ್ಮಿಗೆ ಬರುವವರ ಸಂಖ್ಯೆ ಕಡಿಮೆ ಆಗ್ತಾ ಬಂತು. ಎಲಿಮೆಂಟ್ರಿ ಮುಚ್ಚಿತು. ಹೈಸ್ಕೂಲು ವಿದ್ಯಾರ್ಥಿಗಳ ಸಂಖ್ಯೆ ಐವತ್ತರ ಕೆಳಗೆ ಇಳಿಯಿತು.